ಇಂದು ದಿ**: 01.08.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಪಾಟೀ ಸವಾಲು ವಾದಿಯ ಪರಃಶ್ರೀ ಎಂ ಎಸ್ ಎಸ್ **.,**ವಕೀಲರಿಂದ**.**

3 ನೇ ಪ್ರತಿವಾದಿ ಇಂದು ನ್ಯಾಯಾಲಯಕ್ಕೆ ಬಂದಿರುವುದಿಲ್ಲ. 3 ನೇ ಪ್ರತಿವಾದಿ ನನಗೆ ಸಂಬಂಧಿಕನು ಅಲ್ಲ ಸ್ನೇಹಿತನು ಅಲ್ಲ. ಮೂಲ ವ್ಯವಹಾರ ನಡೆದದ್ದು ಗೊತ್ತ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಮೂಲ ವ್ಯವಹಾರದ ಪತ್ರ ನೋಡಿಲ್ಲ ಎಂದರೆ ಸಾಕ್ಷಿ ನೋಡಿಲ್ಲ ಎಂದು ಹೇಳುತ್ತಾರೆ. ಮೂಲ ವ್ಯವಹಾರ ಅವರ ಮಧ್ಯೆ ಯಾವಾಗ ಆಗಿತ್ತು ಎಂದು ನನಗೆ ಗೊತ್ತಿಲ್ಲ ಎನ್ನುವುದು ನಿಜ. ನಾನು ಸಾಕ್ಷಿದಾರನಾಗಿ ಸಹಿ ಮಾಡಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ವಿಷಯ ಬರೆದಿದೆ ಎಂದು ಗೊತ್ತಿರುವುದಿಲ್ಲ. ನನ್ನ ಸಮಕ್ಷಮ 13 ಲಕ್ಷ ರೂ.ಗಳ ವ್ಯವಹಾರ ಆಗಿರುತ್ತದೆ. ಸದರಿ 13 ಲಕ್ಷಕ್ಕೆ ಎಷ್ಟು ಬಡ್ಡಿ ಎನ್ನುವುದು ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ವಾದಿ ಮತ್ತು ವಾದಿಯ ಮಾವ ಎಷ್ಟು ಬಡ್ಡಿ ಆಗಿದೆ ಎಂದು ಲೆಕ್ಕ ಮಾಡಿ ಹೇಳಿಲ್ಲ. 3 ನೇ ಪ್ರತಿವಾದಿಯ ಮೇಲೆ ನ್ಯಾಯಾಲಯಗಳಲ್ಲಿ ಸುಮಾರು 10-15 ಕೇಸುಗಳು ಇರುತ್ತವೆ ಎನ್ನುವುದು ಗೊತ್ತಿರುವುದಿಲ್ಲ. ನನ್ನ ಮೇಲೆ ಒಂದು ಕೇಸು ಇರುತ್ತದೆ. ಅನ್ನಭಾಗ್ಯ ಯೋಜನೆ ಅಡಿಯ ಅಕ್ಕಿಯನ್ನು ಅಕ್ರಮವಾಗಿ ದಾಸ್ತಾನು ಮಾಡಿದ್ದೆ ಎಂದು ನನ್ನ ಮೇಲೆ ಕೇಸು ಇತ್ತು ಎನ್ನುವುದು ನಿಜ. ಸದರಿ ಕೇಸು ಸಿಸಿ. ನಂ. 259/2019 ಎನ್ನುವುದು ಗೊತ್ತಿರುವುದಿಲ್ಲ. ಸಾಕ್ಷಿಗೆ ವಾದಿ ಪರ ವಕೀಲರು ಸದರಿ ಪ್ರಕರಣದ ಪಿರ್ಯಾದಿ, ಪ್ರ.ವ.ವರದಿ ಹಾಗೂ ಅಂತಿಮವರದಿಯ ದೃಢೀಕೃತ ನಕಲುಗಳನ್ನು ತೋರಿಸಲಾಗಿ, ಸಾಕ್ಷಿ ಅವುಗಳನ್ನು ನೋಡಿ ಹೌದು ಎಂದು ಹೇಳಿದ್ದರಿಂದ, ಸದರಿ ಪಿರ್ಯಾದಿ, ಪ್ರ.ವ.ವರದಿ ಹಾಗೂ ಅಂತಿಮವರದಿಯ ದೃಢೀಕೃತ ನಕಲುಗಳನ್ನು ಕ್ರಮವಾಗಿ ನಿಪಿಃ 15 ರಿಂದ 17 ಎಂದು ಗುರುತಿಸಲಾಯಿತು. 13 ಲಕ್ಷ ರೂ. ಗಳನ್ನು ಯಾವ ದಿನಾಂಕದಂದು ತೆಗೆದುಕೊಂಡಿದ್ದರು ಎಂದು ಹೇಳಲು ಆಗುವುದಿಲ್ಲ. ಸದರಿ ದಿನಾಂಕವನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ 13 ಲಕ್ಷ ರೂ.ಗಳನ್ನು ಮರಳಿ ಕೊಟ್ಟಿರುತ್ತಾರೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಹನುಮಂತಪ್ಪ 13 ಲಕ್ಷ ರೂ.ಗಳನ್ನು ಸಾಲ ಕೊಟ್ಟಿದ್ದ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. 13 ಲಕ್ಷ ರೂ.ಗಳನ್ನು ಸಾಲವಾಗಿ ಹನುಮಂತಪ್ಪ ಕೊಟ್ಟಿದ್ದ. ಹನುಮಂತಪ್ಪ ಕೊಟ್ಟ 13 ಲಕ್ಷ ರೂ.ಗಳ ಸಾಲವನ್ನು ಹಿಂದಿರುಗಿಸಿರುತ್ತಾರೆ. 1 ರಿಂದ 3 ನೇ ಪ್ರತಿವಾದಿಗಳಿಗೆ ಅನುಕೂಲ ಆಗಲಿ ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯನ್ನು ನಾನು ಚಿಕ್ಕವನಿದ್ದಾಗಿನಿಂದಲೂ ನೋಡುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಜುಲೈ 2020 ರಲ್ಲಿ ಹಣ ಮರಳಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿ 13 ಲಕ್ಷ ರೂ. ಗಳನ್ನು 3 ನೇ ಪ್ರತಿವಾದಿ ಮತ್ತು ಅವನ ತಾಯಿ ಎಲ್ಲಿ ಯಾರಿಂದ ತೆಗೆದುಕೊಂಡು ಬಂದಿದ್ದರು ಎಂದು ಹೇಳಲು ಆಗುವುದಿಲ್ಲ. ಯಾವುದೇ ಹಣಕಾಸಿನ ಬಡ್ಡಿ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಜಮೀನು ಇರುವುದು ಗೊತ್ತಿರುವುದಿಲ್ಲ. ಸದರಿ ಜಮೀನಿನ ವಿಚಾರವಾಗಿ ಮಾಡಿಕೊಂಡ ಕರಾರು ಪತ್ರದ ಬಗ್ಗೆ ನನಗೆ ಗೊತ್ತಿಲ್ಲ ಎನ್ನುವುದು ನಿಜ. ಜೆರಾಕ್ಸ್ ಕರಾರು ಪತ್ರವನ್ನು 3 ನೇ ಪ್ರತಿವಾದಿ ಮತ್ತು ನಾನು ಸೇರಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು 3 ನೇ ಪ್ರತಿವಾದಿಯ ವಿಶ್ವಾಸಕ್ಕೆ ಕಟ್ಟು ಬಿದ್ದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

(ವೈ.ಕೆ ಬೇನಾಳ್ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.